ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ, ದಿನಾಂಕ ೨೭ನೇ ಜೂನ್ ೧೯೯೦, ಆಷಾಢ ೬, ೧೯೧೨ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು].

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಗುಂಡ್ಲು ಪೇಟೆಯಲ್ಲಿರುವ ಕೊಳವೆ ಬಾವಿಗಳು

೧೦೦೧. ಶ್ರಿಮತಿ ಕೆ.ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—

(ಅ) ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಒಟ್ಟು ಕುಡಿಯುವ ನೀರಿನ ಕೊಳವೆ ಬಾವಿಗಳೆಷ್ಟು ?

(ಆ) ಆ ಬಾವಿಗಳಲ್ಲಿ ಹಾಲಿ ನೀರಿದ್ದು ಉಪಯೋಗವಾಗುತ್ತಿರುವ ಕೊಳವೆ ಬಾವಿಗಳೆಷ್ಟು; ಹಾಗೂ ಕೆಟ್ಟುಹೋಗಿರುವ ಬಾವಿಗಳು ಎಷ್ಟು ? ಹಾಗೂ ಅವುಗಳನ್ನು ದುರಸ್ತಿ ಮಾಡಲು ಸರ್ಕಾರದವರು ಈವರೆಗೆ ಕೈಗೊಂಡಿರುವ ಕ್ರಮಗಳೇನು ?

(ಇ) ಕುಡಿಯುವ ನೀರಿನ ಅಭಾವ ಇರುವ ಕಡೆಗಳಲ್ಲಿ ಹೊಸದಾಗಿ ಕೊಳವೆ ಬಾವಿಗಳನ್ನು ತೋಡಲು ಇರುವ ಕೋರಿಕೆ ಎಷ್ಟು? ಹಾಗೂ ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಾರ್ತಾ ಮತ್ತು ಪ್ರಚಾರ ಸಚಿವರು.)

(ಅ) ೮೨೬

(ಆ) ೮೦೮ ಕೊಳವೆ ಬಾವಿಗಳು ಉಪಯೋಗದಲ್ಲಿದ್ದು ೧೮ ಕೊಳವೆ ಬಾವಿಗಳು ಕೆಟ್ಟಿರುತ್ತದೆ. ಈ ರೀತಿ ಕೆಟ್ಟಿರುವ ಕೊಳವೆ ಬಾವಿಗಳನ್ನು ದುರಸ್ತಿಪಡಿಸಲು ೫ ಜನ ಸಿಬ್ಬಂದಿ ಇರುವ ಒಂದು ವಾಹನವನ್ನು ತಾಲ್ಲೂಕಿಗೆ ಪಹಿಸಿದ್ದು. ಈ ವ್ಯವಸ್ಥೆಯ ಮೂಲಕ ದುರಸ್ತಿಪಡಿಸಲಾಗುತ್ತಿದೆ. ಕೊಳವೆ ಬಾವಿಗಳ ದಿನನಿತ್ಯ ದುರಸ್ತಿ ಮತ್ತು ನಿರ್ವಹಣೆಯು ಮಂಡಲ ಪಂಚಾಯತಿಗಳ ಜವಾಬ್ದಾರಿಯಾಗಿರುತ್ತದೆ.

(ಇ) (೧) ೧೯೯೦ನೇ ಸಾಲಿನ ಬೇಸಿಗೆ ಅಭಾವ ಪರಿಹಾರದ ಅನ್ವಯ ೩೧ ಗ್ರಾಮ/ವಸತಿಗಳಲ್ಲಿ ೩೧ ಕೊಳವೆ ಬಾವಿಗಳನ್ನು ತೋಡಲು ಯೋಜಿಸಿದೆ, ಈ ಪ್ರಸ್ತಾವನೆಯನ್ನು ಕಂದಾಯ ಇಲಾಖೆಯ ಮಂಜೂರಾತಿಗಾಗಿ ಕಳುಹಿಸಿಕೊಡಲಾಗಿದೆ.

(೨) ೧೯೯೦-೯೧ ನೇ ಸಾಲಿನ ಆಯವ್ಯಯದಲ್ಲಿ ೨ ನಳ ನೀರು ಸರಬರಾಜು ಯೋಜನೆಗಳನ್ನು ಮಂಜೂರು ಮಾಡಲಾಗಿದೆ. ೧೯೯೦-೯೧ ನೇ ಸಾಲಿನ ಕ್ರಿಯಾಶೀಲ ಯೋಜನೆಯಡಿಲ್ಲಿಯಲ್ಲಿ ೨ ಕಿರು ನೀರು ಸರಬರಾಜು ಯೋಜನೆ ಹಾಗೂ ೬ ಕೊಳವೆ ಬಾವಿಗಳನ್ನು ಮಂಜೂರು ಮಾಡಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನ್ನ ತಾಲ್ಲೂಕಿನಲ್ಲಿ ೮೨೬ ಬಾವಿಗಳನ್ನು ತೆಗೆದದ್ದು ಆಗಿದೆ. ೮೦೮ ಬೋರ್‌ವೆಲ್‌ಗಳು ವರ್ಕ್ ಮಾಡುತ್ತಿವೆ. ಹಾಗೂ ಇನ್ನೂ ೩೧ ನ್ನು ತೆಗೆಯಬೇಕೆಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನಾನು ೧೯೫೭ ನೇ ಇಸವಿಯಲ್ಲಿ ಇಲ್ಲಿಗೆ ಬಂದಾಗಿನಿಂದಲೂ ನಮ್ಮ ತಾಲ್ಲೂಕು ಎಂತಹ ಪರಿಸ್ಥಿತಿಯಲ್ಲಿದೆ ಎನ್ನುವುದನ್ನು ಹೇಳುತ್ತಲೆ. ಬಂದಿದ್ದೇನೆ ಅದೂ ವರದಿಯಲ್ಲೂ ಇದೆ. ಇದು ಡ್ರಾಟ್‌ಫೋನ್ ಏರಿಯಾ ಸ್ಕೆರ್‌ಸಿಟಿ ಏರಿಯಾ. ಫ್ಯಾಮಿನ್ ಏರಿಯಾಟಿ, ಇಷ್ಟು ಶಾಪಗ್ರಸ್ತವಾದ ತಾಲ್ಲೂಕು ಅದು.

ಅಧ್ಯಕ್ಷರು.— ಅದಕ್ಕೆ ವರ ನೀವೊಬ್ಬರೆ.....

ಶ್ರೀಮತಿ ಕೆ.ಎಸ್. ನಾಗರತ್ನಮ್ಮ :—ಅದಕ್ಕೆ ನಾನು ವರವೂ ಶಾಪವೂ ಗೊತ್ತಿಲ್ಲ. ಅಂತೂ ಆದು ಒಂದು ತಾಲ್ಲೂಕಿಗಾಗಿ ಉಳಿದಿದೆ. ಹಿಂದೆ ಕಡಿದಾಳ್ ಮಂಜಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಅವರು ಹೇಳುತ್ತಿದ್ದರು. ಏನೆಂದರೆ ನಿಮ್ಮ ತಾಲ್ಲೂಕು, ಸ್ಕೇರ್‌ಸಿಟಿ ಏರಿಯಾ ಎಂದು. ಆದರೆ ನಿಮ್ಮನ್ನು ನೋಡಿದರೆ ಆ ರೀತಿ ಹೇಳುವುದಕ್ಕಾಗುವುದಿಲ್ಲವಲ್ಲ ಎಂದು ಅದಕ್ಕೇ ನಾನು ಕೂಡ ಅವರನ್ನು ಕುರಿತು ನಿಮ್ಮನ್ನು ನೋಡಿದರೆ ನಿಮ್ಮ ಊರಂ ಆಷ್ಟೇ ಸ್ಕೇರ್‌ಸಿಟಿ ಏರಿಯಾ ಅಂತ ಕಾಣುವುದಿಲ್ಲವಲ್ಲ ಅಂತ ಹೇಳುತ್ತಿದ್ದೆ. ಆದು ಏನೇ ಇರಲಿ. ನಮ್ಮ ತಾಲ್ಲೂಕಿನ ಪರಿಸ್ಥಿತಿ ಹೀಗಿದೆ. ಈಗ ನಮ್ಮ ತಾಲ್ಲೂಕಿಗೆ ಇನ್ನೂ ೩೧ ಬಾವಿಗಳನ್ನು ತೆಗೆದರೆ ನಮ್ಮ ಪರಿಸ್ಥಿತಿ ಪರಿಹಾರವಾಗುವುದಿಲ್ಲ ಆಷ್ಟೆ. ಏಕೆಂದರೆ ೨೦೦ ಅಡಿ ಆಳಕ್ಕೆ ನೀರು ಹೊರಟುಹೋಗಿದೆ. ಅಂತಹ ಸ್ಥಿತಿಯಲ್ಲಿ ೩೧ ಕೊಳವೆ ಬಾವಿಗಳನ್ನು ತೆಗೆದರೆ ಅದರ ಪರಿಸ್ಥಿತಿ ಸರಿ ಹೋಗುತ್ತದೆ ಎನ್ನುವುದರಲ್ಲಿ ಅರ್ಥವಿಲ್ಲ. ನನ್ನ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು, ರೆವಿನ್ಯೂ ಮಿನಿಸ್ಟರ್, ಪವರ್ ಮಿನಿಸ್ಟರ್ ಮಂತ್ತು ಹಣಕಾಸಿನ ಸಚಿವರು ಇವರಷ್ಟೂ ಜನರೂ ನಮ್ಮ ಸಹಾಯಕ್ಕಾಗಿ ಬರಬೇಕಾಗುತದೆ. ಈ ಹಿಂದೆಯೇ ಕೊಳವೆ ಬಾವಿಗಳ ಪಾಯಿಂಟ್‌ಗಳನ್ನು ನೋಡಿ ಬಾವಿ ತೆಗೆದು ಆಗಿದೆ. ಇನ್ನು ಮುಂದೆ ನಮ್ಮ ಪರಿಹಾರಕ್ಕೋಸ್ಕರ ಎಲ್ಲಿ ಪಾಯಿಂಟ್ಸ್‌ಗಳನ್ನು ಹುಡುಕುತ್ತೀರಿ ಎಂಬುದಕ್ಕೆ ಯಾವತ್ತರದ ಆಕ್ಷನ್ ಅನ್ನು ಮಾನ್ಯ ಮಂತ್ರಿಗಳು ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು.

ಶ್ರೀ ಎಂ.ವೈ. ಘೋರ್ಪಡೆ:— ಈ ತಾಲ್ಲೂಕಿನಲ್ಲಿ ೮೨೬ ಕೊಳವೆ ಬಾವಿಗಳು ಇವೆ. ಮಂತ್ತೆ ೨೯ ಪೈಪ್ ವಾಟರ್‌ಸಪ್ಲೈ ಸ್ಕೀಮುಗಳು ಇವೆ. ೨೬ ಮಿನಿ ವಾಟರ್‌ಸಪ್ಲೈ ಸ್ಕೀಮುಗಳು ಇದ್ದರೂ ಕುಡಿಯುವ ನೀರಿನ ಅಭಾವ ಇದೆ; ಎಂಬುದು ಸರ್ಕಾರಕ್ಕೆ ಗೊತ್ತಾಗಿದೆ. ಆದಕ್ಕಾಗಿ ಈ ವರ್ಷ ೩೧ ಕೊಳವೆ ಬಾವಿಗಳನ್ನು ಮಾಡಿಸಬೇಕೆಂಬ ಕಾರ್ಯಕ್ರಮವನ್ನು ಸ್ಕೇರ್‌ಸಿಟಿ ರಿಲೀಫ್‌ನಲ್ಲಿ ಹಾಕಿ ಕೊಂಡಿದ್ದೇವೆ. ಆದೂ ಅಲ್ಲದೆ ಇನ್ನೂ ೬ ಕೊಳವೆ ಬಾವಿಗಳನ್ನು ಯೋಜನಾ ವೆಚ್ಚದಲ್ಲಿ ತೆಗೆಯುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮಂತ್ತೆ ೨ ಪೈಪ್ಡ್ ವಾಟರ್ ಸಪ್ಲೈ ಸ್ಕೀಮು ಈ ವರ್ಷ ಮಾಡಬೇಕು ಎಂದು ಇದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇಷ್ಟು ಮಾಡಿದರೂ ಒಂದೊಂದು ಕಡೆ ಸಾಕಷ್ಟು ನೀರು ಸಿಗಲಿಕ್ಕಿಲ್ಲ. ಅಂತಹ ಪಕ್ಷದಲ್ಲಿ ಬೇರೆ ಕಡೆಯಿಂದ ನೀರನ್ನು ತರಬೇಕಾಗುತ್ತದೆ. ಅಂತಹ ಸಂದರ್ಭ ಬಂದಾಗ ಮಿನಿ ವಾಟರ್ ಸಪ್ಲೈ ಸ್ಕೀಮಿನಿಂದಲಾದಷ್ಟೂ, ಪೈಪ್ ವಾಟರ್‌ಸಪ್ಲೈ ಸ್ಕೀಮಿನಿಂದಲಾದರೂ ತೊಂದರೆಗೆ ಒಳಗಾಗಿರುವ ಊರಿಗೆ ನೀರನ್ನು ಸರಬರಾಜು ಮಾಡುವಷ್ಟು ನೀರು ಸಿಕ್ಕುವಂತಿದ್ದರೆ. ಅಂತಹ ಹಳ್ಳಿಗಳನ್ನು ಪ್ಲಾಬ್ಲಂ ವಿಲೇಜಸ್ ಎಂಬುದಾಗಿ ಇಟ್ಟುಕೊಂಡು ನೀರನ್ನು ಸರಬರಾಜು ಮಾಡಿಸುವುದಕ್ಕೆ ನಾನು ಸರ್ವ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ :— ಮೂರು ದಿವಸಗಳಿಗೆ ಒಂದೊಂದು ಸಾರಿ ಪಂಪುಗಳು ಕೆಟ್ಟು ಹೋಗುತ್ತವೆ. ಇವುಗಳನ್ನು ರಿಪೇರಿ ಮಾಡಲು ಮಂಡಲ್ ಪಂಚಾಯ್ತಿಯವರನ್ನು ಜವಾಬ್ದಾರ ನ್ನಾಗಿ ಮಾಡಿದ್ದೀರಿ. ಪ್ರತಿ ಸಾರಿ ಯಾವಾಗ ಹೋಗಿ ಅವರನ್ನು ನೋಡಿದರೂ ನವಂಗೆ ಆ ಸಾಮಾನು ಬೇಕು, ಈ ಸಾಮಾನ್ಯಬೇಕು ಎಂದು ಹೇಳಿ ಹೋಗುತ್ತಾರೆ ಇದಕ್ಕೆ ದುಡ್ಡು ಇಲ್ಲ, ಆದಕ್ಕೆ ದುಡ್ಡು ಇಲ್ಲ, ಎಂದು ಹೇಳುತ್ತಾರೆ ಅವರ ಹತ್ತಿರ ದುಡ್ಡು ಇಲ್ಲದಿದ್ದರೆ ಯಾವುದೂ ರಿಪೇರಿಯಾಗುವುದಿಲ್ಲ. ಆದಕ್ಕೆ ಬೇರೆ ವ್ಯವಸ್ಥೆಯನ್ನು ಮಾಡಿ ಇವುಗಳನ್ನು ರಿಪೇರಿ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆಯೇ ? ಜೊತೆಗೆ ಆ ವ್ಯಾನ್ ಕೂಡ ಯಾರ ಕೈಗೂ ಸಿಗುವುದಿಲ್ಲ.

ಶ್ರೀ ಎಂ.ವೈ.ಘೋರ್ಪಡೆ:— ರಿಪೇರಿ ಮಾಡುವ ಕೆಲಸವನ್ನು ಏನು ಪ್ರಾರಂಭ ಮಾಡಿದ್ದಾರೆ ಅದನ್ನು ಮಂಡಲ್ ಪಂಚಾಯ್ತಿಗೆ ವಹಿಸಿದುದು ನಿಜ. ಆದರೆ ಎಷ್ಟೋ ಮಂಡಲ್ ಪಂಚಾಯ್ತಿಗಳಿಗೆ ಇದನ್ನು ಮಾಡುವಂತಹ ಶಕ್ತಿ ಸಾಮರ್ಥ್ಯ ಸಾಕಷ್ಟು ಇಲ್ಲ. ಅದಕ್ಕೋಸ್ಕರ ತಾಲ್ಲೂಕು ಮಟ್ಟದಲ್ಲಿ ಒಂದು ಜೀಪನ್ನು ಕೊಟ್ಟು ಅವರ ಜೊತೆ ಪರ್ಸನಲ್ ಇಟ್ಟು. ಮೊಬೈಲ್ ರೀತಿಯಲ್ಲಿ ಇಟ್ಟುಕೊಂಡು ಇಡೀ ತಾಲ್ಲೂಕಿನಲ್ಲಿ ಇವುಗಳನ್ನು ರಿಪೇರಿ ಮಾಡುವ ಕೆಲಸವನ್ನು ಮಾಡುವ ರೀತಿಯಲ್ಲಿ ಮಾಡಬೇಕೆಂ ಸರ್ಕಾರದ ಉದ್ದೇಶ ಇದೆ. ಆ ಕಾರಣ ಮೊಬೈಲ್ ಜೀಪನ್ನು ಪ್ರತ್ಯೇಕವಾಗಿ ಇಟ್ಟು, ಈ ರಿಪೇರಿ ಮಾಡುವ ಕೆಲಸವನ್ನು ಇಡೀ ತಾಲ್ಲೂಕಿನಲ್ಲೆ ಮಾಡುವ ಕೆಲಸ ಮಾಡಿದರೆ ಸೂಕ್ತವೆಂದು ನನಗನ್ನಿಸಿದೆ. ಕಾನೂನು ಪ್ರಕಾರ ಮಂಡಲ್ ಪಂಚಾಯ್ತಿಗೆ ಅಧಿಕಾರ ಇದ್ದರೂ ಕೂಡ ತಾಲ್ಲೂಕು ಮಟ್ಟದಲ್ಲಿರತಕ್ಕ ಜೀಪು ಹಾಗೂ ಪರ್ಸನಲ್ ಇದರ ಉಪಯೋಗವನ್ನು ಒಂದು ಆರ್ಗನೈಜ್ ರೀತಿಯಲ್ಲಿ ಮಾಡಬೇಕಾಗುತ್ತದೆ. ಆ ರೀತಿ ಮಾಡುವುದಕ್ಕೆ ಎಲ್ಲ ಪ್ರಯತ್ನ ಮಾಡುತ್ತಿದ್ದೇವೆ.

ಅಧ್ಯಕರು:— ಇವರು ಯಾರ ಕಂಟ್ರೋಲ್‌ನಲ್ಲಿರುತ್ತಾರೆ ?

ಶ್ರೀ ಎಂ. ವೈ. ಘೋರ್ಪಡೆ:— ಅದು ಬೇರೆ ಬೇರೆ ಕಡೆ, ಬೇರೆ ಬೇರೆ ರೀತಿಯಲ್ಲಿದೆ. ಕೆಲವು ಕಡೆ ಜಿಲ್ಲಾಪರಿಷತ್ತಿನ ಕಂಟ್ರೋಲ್‌ನಲ್ಲಿರುತ್ತಾರೆ, ಕೆಲವು ಕಡೆ ಮಂಡಲ್ ಪಂಚಾಯ್ತಿ ಕಂಟ್ರೋಲ್‌ನಲ್ಲಿದ್ದಾರೆ. ಆದರೆ ತಾಲ್ಲೂಕು ಮಟ್ಟದಲ್ಲಿ ಫಿಜಿಕಲ್ ಆಗಿ ಇರುತ್ತಾರೆ. ಯಾರ ಕಂಟ್ರೋಲ್‌ನಲ್ಲಿದ್ದರೂ ಕೂಡ ಅವರು ಪ್ಲಾನ್ ಪ್ರೊಗ್ರಾಮ್ ಕಾರ್ಯಕ್ರಮ ಹಾಕಿಕೊಳ್ಳಲಿಕ್ಕೆ ಏನೂ ತೊಂದರೆ ಇಲ್ಲ. ಎಲ್ಲಿ ಈ ರೀತಿಯ ತೊಂದರೆ ಇದೆಯೋ ಅಲ್ಲಿ ಸರ್ಕಾರವೇ ನೇರವಾಗಿ ಕಂಟಾಕ್ಟ ಮಾಡಿ ಆಯಾ ಪ್ರದೇಶದಲ್ಲಿ ರಿಪೇರಿ ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವತ್ತು ಜಿಲ್ಲಾಪರಿಷತ್ತಿನಲ್ಲಿ ಒಬ್ಬ ಎಂಜಿನಿಯರ್ ಇರುತ್ತಾರೆ. ಅವರೇ ರಸ್ತೆ ನೋಡಿಕೊಳ್ಳಬೇಕು. ಕೊಳವೆ ಬಾವಿ ನೋಡಿಕೊಳ್ಳಬೇಕು. ಸಕಲ ಕೆಲಸ ನೋಡುವ ಸಕಲ ಸಾರ್ವಭೌಮ ಆತ. ಆದ್ದರಿಂದ ಕುಡಿಯುವ ನೀರಿನ ಬಗ್ಗೆಯೇ ಪ್ರತ್ಯೇಕ ಅಧಿಕಾರಿಯನ್ನು ಇಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ನಾವು ಏನು ಮಾಡಿದ್ದೇವೆ ಅದಕ್ಕಿಂತ ಹೆಚ್ಚು ಏನು ಮಾಡ ಬೇಕಾದರೂ ಸರ್ಕಾರ ಅದನ್ನು ಖಂಡಿತವಾಗಿ ಗಮನಿಸುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ಕೆಲವನ್ನು ತಾಲ್ಲೂಕು ಮಟ್ಟದಲ್ಲಿ ಕೆಲವನ್ನು ಮಂಡಲ ಪಂಚಾಯಿತಿ ಮಟ್ಟದಲ್ಲಿ ನೋಡಿಕೊಳ್ಳುವುದರಿಂದ ಇವೊತ್ತು ಈ ಸಮಸ್ಯೆ ದ್ವಂಧ್ವವಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲಾಪರಿಷತ್ತಿನಲ್ಲಿ ಈ ಬಗ್ಗೆ ನಾವು ಪ್ರಸ್ತಾಪ ಕೂಡ ಮಾಡಿದ್ದೇವೆ. ಕೆಲವು ಕಡೆ ಮಂಡಲ ಪಂಚಾಯಿತಿ ಮಟ್ಟದಲ್ಲಿ ಕೊಟ್ಟಿದ್ದೇವೆಂದು ಹೇಳುತ್ತೀರಿ. ಇವತ್ತು ಮಂಡಲಗಳಲ್ಲಿ ಹಣ ಇಲ್ಲ, ವಾಹನ ಇಲ್ಲ. ಇವತ್ತು ಜಿಲ್ಲಾ ಪರಿಷತ್ತಿನಲ್ಲಿ ಬೋರ್ ವೆಲ್‌ನ ೧೫-೨೦ ಅಡಿ ಉದ್ದದ ಪೈಪ್‌ಗಳನ್ನು ಜೀಪ್‌ನಲ್ಲಿ ಹಾಕಿಕೊಂಡು ಹೋಗುವುದಕ್ಕಾಗುವುದಿಲ್ಲ. ಅಲ್ಲಿಗೆ ನೀವು ವ್ಯಾನ್ ಕೊಡ ಬೇಕಾಗುತ್ತದೆ. ಇವತ್ತು ಅಲ್ಲಿಗೆ ಕೊಟ್ಟಿರುವ ವಾಹನಗಳು ಕೆಟ್ಟು ನಿಂತಿವೆ. ಇವತ್ತು ಪ್ರತಿಯೊಂದು ಊರಿನಲ್ಲೂ ಓಪನ್‌ವೆಲ್‌ಗಳು ಬತ್ತಿದ್ದು ಎಲ್ಲರೂ ಬೋರ್ ವೆಲ್‌ಗಳನ್ನೇ ನಂಬಿಕೊಳ್ಳಬೇಕಾಗಿದೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಬಗ್ಗೆ ಪ್ರಥಮ ಗಮನ ಕೊಡದಿದ್ದರೆ ಹೇಗೆ ? ಇವತ್ತು ಜೀಪ್ ಕೊಟ್ಟರೆ ಅಲ್ಲಾಗಳಲ್ಲಿ ಪೈಪ್ ಸಾಗಿಸಲು ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳಿಗೆ ಸಂದೂರಿನಲ್ಲಿ ಈ ಅನುಭವ ಇಲ್ಲದಿರುವುದರಿಂದ ಅವರಿಗೆ ಕಷ್ಟ ಗೊತ್ತಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರು ನನಗೆ ಇದರಲ್ಲಿ ಏನೂ ಅನುಭವ ಇಲ್ಲ ಎಂದು ಹೇಳಿದರು. ಇದರ ಬಗ್ಗೆ ನನಗೆ ಇರುವಷ್ಟು ಅನುಭವ ಬೇರೆ ಯಾವ ವಿಷಯದಲ್ಲೂ ಇಲ್ಲ. ಸಂಡೂರಿನಲ್ಲಿ ಇದನ್ನು ನಾನು ಬೇಕಾದಷ್ಟು ಅನುಭವಿಸಿದ್ದೇನೆ. ಅಲ್ಲಿನ ಬೋರ್‌ವೆಲ್‌ಗಳನ್ನು ಯಾರೂ ರಿಪೇರಿ ಮಾಡುವುದಕ್ಕೆ ಇಲ್ಲದ ಪರಿಸ್ಥಿತಿಯನ್ನೂ ನಾವು ಎದುರಿಸಿದ್ದೇವೆ. ಈಗ ಒಂದು ಜೀಪನ್ನು ಇಟ್ಟಿದ್ದೇವೆ. ಈ ವ್ಯವಸ್ಥೆ ಬಗ್ಗೆ ಎಲ್ಲಾ ರೀತಿಯ ಅಭಿಪ್ರಾಯಗಳೂ ಬರುತ್ತಿವೆ. ಕೆಲವರು ಇದು ಮಂಡಲ ಪಂಚಾಯಿತಿಯಲ್ಲೇ ಇರಲಿ ಎಂದು ಹೇಳಿದ್ದೂ ಉಂಟು. ಇನ್ನೂ ಕೆಲವರು ತಾಲ್ಲೂಕು ಮಟ್ಟದಲ್ಲಿ ಇದ್ದರೆ ವಾಸಿ ಎಂದು ಹೇಳುತ್ತಿದ್ದಾರೆ. ನನ್ನ ವೈಯಕ್ತಿಕ ಅಭಿಪ್ರಾಯ ಎಂದರೆ ತಾಲ್ಲೂಕು ಮಟ್ಟದಲ್ಲಿ ನಾವು ವ್ಯವಸ್ಥೆ ಮಾಡಬೇಕಾಗುತ್ತದೆ. ಹಾಗೆ ಮಾಡಿದರೆ ಆಗ ಮಂಡಲಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ಬಗ್ಗೆ ನಾವು ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಇದು ಜಿಲ್ಲಾ ಮತ್ತು ವಿಭಾಗೀಯ ಮಟ್ಟದಲ್ಲಿ ಚರ್ಚೆಯಾಗ ಬೇಕೆಂದು ಹೇಳಿದ್ದೇವೆ. ಆ ಚರ್ಚೆಯ ಎಲ್ಲರ ಒಟ್ಟಾಭಿಪ್ರಾಯ ತಿಳಿದುಕೊಂಡು ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ತಾಲ್ಲೂಕು ಮಟ್ಟದಲ್ಲಿ ಇದು ನಡೆಯಬೇಕಾಗುತ್ತದೆ.

ಜಿಲ್ಲಾ ಪರಿಷತ್ತು ಕಾಯ್ದೆಗೆ ತಿದ್ದುಪಡಿ

1081. SRI K. B. KOLIWAD (Ranibennur).—Will the Minister for Rural Development Panhachyat Raj, Information and Publicity be pleased to state.—

a) Whether there is any proposal before the Government to amend the Zilla Parishad Taluk Panchayat and Mandal Panchayat Act to reduce from 2/3 Majority to bring no confidence motion against Zilla Parishad Adhyaksha and Up-adhyaksha ?